# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

| | |
|---|---|
| ನಿಗಮ ಕಛೇರಿ ವಿಳಾಸ :<br>ನಂ.29, ವಿಜಯನಗರ 2ನೇ ಹಂತ,<br>ಹಿನಕಲ್<br>ಮೈಸೂರು-570017<br>Email:www.cescmysore.karnataka.gov.in<br>CIN:U40109KA2004SGC035177 | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ<br>ಕಾ ಮತ್ತು ಪಾ ಉಪ- ವಿಭಾಗ, ಬಿ.ಹೆಚ್.ರಸ್ತೆ<br>ಬಾಣಾವರ-573112<br>ಫೋನ್: 08174-235695<br>Email: aeebanavara@cescmysore.org |


ಸಂಖ್ಯೆ :-ಸ.ಕಾ.ಇಂ(ವಿ)/ಸ.ಇಂ(ತಾ)/2021-22/2914A

ದಿನಾಂಕ : 22-12-21

**• ಜನ ಸಂಪರ್ಕ ಸಭೆಯ ನಡಾವಳಿಗಳು•**

ದಿನಾಂಕ: 22.12.2021 ರಂದು ಮಧ್ಯಾಹ್ನ 3:00 ಘಂಟೆಗೆ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಅರಸೀಕೆರೆ ವಿಭಾಗ ರವರ ಅಧ್ಯಕ್ಷತೆಯಲ್ಲಿ ಬಾಣಾವರ ಉಪ-ವಿಭಾಗ ಕಛೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-**

1. ಲೆಕ್ಕಾಧಿಕಾರಿಗಳು, ಅರಸೀಕೆರೆ ವಿಭಾಗ ಕಛೇರಿ
2. ಲೆಕ್ಕಾಧಿಕಾರಿಗಳು(ಆಂ), ಅರಸೀಕೆರೆ ವಿಭಾಗ ಕಛೇರಿ
3. ಶ್ರೀ ಮಂಜುನಾಥ.ಕೆ.ಜಿ. ಸ.ಕಾ.ನಿ.ಇಂ(ವಿ), ಸೆಸ್ಕ್,ಬಾಣಾವರ ಉಪ-ವಿಭಾಗ, ಬಾಣಾವರ
4. ಶ್ರೀ ಸಚಿನ್.ಎಸ್.ಆರ್ ಸ.ಇಂ(ತಾ).ಸೆಸ್ಕ್, ತಾಂತ್ರಿಕ ಶಾಖೆ. ಬಾಣಾವರ ಉಪ ವಿಭಾಗ.
5. ಹಿರಿಯ ಸಹಾಯಕರು, ಕಂದಾಯ ಶಾಖೆ ಬಾಣಾವರ ಉಪವಿಭಾಗ

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಬಾಣಾವರ ಉಪವಿಭಾಗ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಶಾಖಾಧಿಕಾರಿಗಳನ್ನು ಹಾಗೂ ಗ್ರಾಹಕರನ್ನು ಸ್ವಾಗತಿಸಿ ಕುಂದುಕೊರತೆಗಳನ್ನು ತಿಳಿಸಲು ಉದ್ದೇಶಿಸಿ ಮಾತನಾಡಿದರು.

| ಕ್ರ ಸಂ | ಗ್ರಾಹಕರ ಕುಂದು ಕೊರತೆಗಳು | ನಡಾವಳಿಯ ಸೂಚನೆಗಳು |
|---|---|---|
| 1 | ಚಿಕ್ಕೇಗೌಡ ಬಿನ್ ರುದ್ರೇಗೌಡ, ಚಿಕ್ಕಜ್ಜಿಕಟ್ಟೆಹಳ್ಳಿ ರವರು 'ಶೀಘ್ರ ವಿದ್ಯುತ್ ಯೋಜನೆಯಡಿಯಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಪರಿವರ್ತಕ ನೀಡುವಂತೆ ಕೋರಿದರು. | ಸಭಾಧ್ಯಕ್ಷರು ಸದರಿಯವರಿಗೆ ಸೂಕ್ತ ಮಾರ್ಗದರ್ಶನ ನೀಡಿದರು |
| 2 | ಕವಿತಾ ಕೋಂ ವೆಂಕಟೇಶ್, ಜಾವಗಲ್. ಹಾಲ ಸ್ಥಾವರಕ್ಕೆ ಹೆಚ್ಚುವರಿ ಭಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. | ಸಭಾಧ್ಯಕ್ಷರು ಸದರಿಯವರಿಗೆ ಸೂಕ್ತ ಮಾರ್ಗದರ್ಶನ ನೀಡಿದರು |

ಈ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಹಾಜರಿದ್ದ ಎಲ್ಲಾ ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ, ಗ್ರಾಹಕರ ಕುಂದು ಕೊರತೆಗಳನ್ನು ಸೆಸ್ಕ್ ಸಹಾಯವಾಣಿ 1912 ಕ್ಕೆ ಕರೆಮಾಡಿ ದೂರನ್ನು ದಾಖಲಿಸಲು ಸೂಚಿಸಿದರು ಹಾಗೂ ಯಾವುದೇ ವಿಧವಾದ ಶಾರ್ಟ್ ಸರ್ಕ್ಯೂಟ್‌ನಿಂದ ಹಾನಿ ಉಂಟಾದಲ್ಲಿ ದೂರು ಸಲ್ಲಿಸಿದ ತಕ್ಷಣ ಕರ್ನಾಟಕ ಸರ್ಕಾರದ ವಿದ್ಯುತ್ ಪರಿವೀಕ್ಷಕರಿಂದ ತಪಾಸಣೆ ಮಾಡಿಸಿ ನಿಗಮದ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ಸಲಹೆ ನೀಡಿದರು. ಕಟ್ಟಡ ನಿರ್ಮಾಣ ಮಾಡುವಾಗ CEA Regulation ಪ್ರಕಾರ ಅಂತರ ಕಾಪಾಡಿಕೊಂಡು ಸುರಕ್ಷಿತವಾಗಿ ಕಟ್ಟಡ ನಿರ್ಮಾಣ ಮಾಡಬೇಕೆಂದು ತಿಳಿಸಿ, ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮಧ್ಯಾಹ್ನ 4.30 ಕ್ಕೆ ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್ ಉಪ ವಿಭಾಗ, ಬಾಣಾವರ

**ಪ್ರತಿಗಳು:-**

1. ಅಧೀಕ್ಷಕ ಇಂಜಿನಿಯರ್(ವಿ) ವೃತ್ತ ಕಛೇರಿ, ಸೆಸ್ಕ್, ಹಾಸನ ರವರ ಮಾಹಿತಿಗಾಗಿ.
2. ಕಾರ್ಯಪಾಲಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಕಛೇರಿ, ಸೆಸ್ಕ್,ಅರಸೀಕೆರೆ ರವರ ಮಾಹಿತಿಗಾಗಿ.
3. ಕಛೇರಿ ಕಡತಕ್ಕೆ.